ವಾಗ್ದರಿ–ರಿಬ್ಬನಪಲ್ಲಿ ರಾಜ್ಯ ಹೆದ್ದಾರಿ ರಸ್ತೆ ನಿರ್ಮಾಣದ ಬಗ್ಗೆ

56(227) ಶ್ರೀ. ಸುಭಾಷ ಆರ್.ಗುತ್ತೇದಾರ್(ಆಳಂದ್)

ಶ್ರೀ ಸಿ.ಎಂ.ಉದಾಸಿ(ಲೋಕೋಪಯೋಗಿ (ಸಚಿವರು)

ಅ) ವಾಗ್ದರಿ–ರಿಬ್ಬನಪಲ್ಲಿ ರಾಜ್ಯ ಹೆದ್ದಾರಿ ರಸ್ತೆ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಯಾವಾಗ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು;

ಹೌದು.

ದಿನಾಂಕ 03–07–2009 ರಂದು ಟೆಂಡರ್ ಪ್ರಕಟಣೆ ಹೊರಡಿಸಲಾಗಿದೆ. ನಿಯಮಾವಳಿಯಂತೆ ಗುತ್ತಿಗೆ ನಿಗಧಿಪಡಿಸಿ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಆ) ಈ ಮೊದಲು ಬಿ.ಒ.ಟಿ. ಯಲ್ಲಿ ಪ್ರಾರಂಭಿಸುತ್ತೇವೆಂದು ಸರ್ಕಾರ ಹೇಳಿದ್ದು ನಿಜವೇ; ಈ ಕಾಮಗಾರಿಯನ್ನು ಪ್ರಾರಂಭಿಸಲು ಯಾವುದೇ ಗುತ್ತಿಗೆದಾರರು ಮುಂದೆ ಬರದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು.

ಮೊದಲನೇ ಕರೆಯಲ್ಲಿ ಯಾವುದೇ ಗುತ್ತಿಗೆದಾರರು ಪ್ರತಿಕ್ರಿಯೆ ನೀಡಿರುವುದಿಲ್ಲ.

ಇ) ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು; ವಿವರಗಳನ್ನು ನೀಡುವುದು;

ಯೋಜನೆಯ ಅನುಮೋದಿತ ಅಂದಾಜು ಮೊತ್ತವು 197.2 ಕೋಟಿ ರೂ.ಗಳಿದ್ದು, ಈ ಕಾಮಗಾರಿಗೆ ಕೇಂದ್ರ ಸರ್ಕಾರದಿಂದ ಮಾರ್ಚ್ 2008ರಲ್ಲಿ ತಾತ್ವಿಕ ಅನುಮೋದನೆ ಪಡೆದು ನಂತರ ಟೆಂಡರ್ ಕರೆಯಲಾಗಿತ್ತು. ಈ ನಡುವಿನಲ್ಲಿ ಕಾಮಗಾರಿಯ ನಿರ್ಮಾಣ ಮೊತ್ತದಲ್ಲಿ ಹೆಚ್ಚಳವಾಗಿದ್ದರಿಂದ ಯಾವುದೇ ಗುತ್ತಿಗೆದಾರರು ಈ ಕಾಮಗಾರಿ ಕೈಗೊಳ್ಳಲು ಆಸಕ್ತಿ ತೋರಿರುವುದಿಲ್ಲ.

ಈ) ಮೇಲ್ಕಂಡ ರಸ್ತೆಯ ಕಾಮಗಾರಿಯನ್ನು ಸರ್ಕಾರದ ವತಿಯಿಂದ ನಬಾರ್ಡ್ ಅಥವಾ ವಿಶ್ವಬ್ಯಾಂಕಿನ ನೆರವಿನಿಂದ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಎಂದಿನಿಂದ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು?

ಈ ಕಾಮಗಾರಿಯನ್ನು ನಬಾರ್ಡ್ ಅಥವಾ ವಿಶ್ವಬ್ಯಾಂಕ್ ನೆರವಿನಿಂದ ಕೈಗೊಳ್ಳುವ ಪ್ರಸ್ತಾವನೆ ಇರುವುದಿಲ್ಲ. ಆದರೆ ಕೇಂದ್ರ ಸರ್ಕಾರದ ವಿ.ಜಿ.ಎಫ್. ಯೋಜನೆಯಡಿ ಕೈಗೊಳ್ಳುವ ಬಗ್ಗೆ ಮರು ಪ್ರಸ್ತಾಪಿಸಲಾಗಿದೆ.

ಶ್ರೀ ಸುಭಾಷ್ ಆರ್. ಗುತ್ತೇದಾರ್: ಮಾನ್ಯ ಅಧ್ಯಕ್ಷರೆ, ಇವರು ಯಾವ ರೀತಿಯಾಗಿ ಒದಗಿಸಿದ್ದಾರೆಂದರೆ, ವಾಗ್ದರಿ–ರಿಬ್ಬನ್‌ಪಲ್ಲಿ ರಾಜ್ಯ ಹೆದ್ದಾರೆ ರಸ್ತೆ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ಹಾಗಿದ್ದಲ್ಲಿ ಯಾವಾಗ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು ಎಂದು ಕೇಳಿದರೆ "ಹೌದು" ಎಂದು

ಹೇಳುತ್ತಾರೆ. ಮತ್ತು ಇಂತಹ ತಾರೀಖಿಗೆ ಟೆಂಡರ್‌ನ್ನು ಕರೆದಿದ್ದೇವೆಂದು ಹೇಳುತ್ತಿದ್ದಾರೆ. ಇದರ ಹಿಂದೆಯೂ ಕೂಡ ಟೆಂಡರ್‌ನ್ನು ಕರೆದಿದ್ದರು. ಅದಕ್ಕೆ ಯಾರು ಕೂಡ ಬಂದಿಲ್ಲ. ಯಾರೂ ಕೂಡ ಟೆಂಡರ್‌ನ್ನು ಹಾಕಿರುವುದಿಲ್ಲ. ಈ ಟೆಂಡರ್ ಬಿಒಟಿ ದರದಲ್ಲಿ ಕರೆದಿದ್ದಾರೆ. ಅದಕ್ಕೆ ಯಾರೂ ಬರುತ್ತಿಲ್ಲ. ಈ ರೋಡ್ ಆಂಧ್ರ ಮತ್ತು ಮಹಾರಾಷ್ಟ್ರಕ್ಕೆ ಜಾಯಿಂಟ್ ಆಗಿದೆ. ಇದರಿಂದ ಮಹಾರಾಷ್ಟ್ರದಿಂದ ಬರತಕ್ಕಂತಹ ವೆಹಿಕಲ್‌ಗಳು ಬಸ್ಸಿನಲ್ಲಾಗಲಿ, ಲಾರಿಯಲ್ಲಾಗಲಿ, ಮಹಾರಾಷ್ಟ್ರದಿಂದ ಮಲಗಿಕೊಂಡು ಬಂದರೆ ಕರ್ನಾಟಕ ರೋಡ್‌ಗೆ ಬಂದಾಗ ಅವರ ಮಲಗಿಕೊಂಡೇ ಇದ್ದು ಕರ್ನಾಟಕವೆಂದು ಹೇಳುತ್ತಾರೆ. ಅವರು ಕರ್ನಾಟಕ ರೋಡ್ ಎಂದು ಹೇಳುವುದಿಲ್ಲ. ನಾಟಕ್ ರೋಡ್ ಎಂದು ಹೇಳುತ್ತಾರೆ. ಈ ತರಹ ಒಂದು ಕರ್ನಾಟಕಕ್ಕೆ ಇವತ್ತು ಅವಮಾನ ಮಾಡತಕ್ಕಂತಹ ರೋಡ್ ಇದೆ. ಅದಕ್ಕಾಗಿ ತಾವು ಇದೊಂದು ಬಿಒಟಿಯಲ್ಲಿ ಕರೆದಿದ್ದೀರಿ, ಅದಕ್ಕಾಗಿ ಟೆಂಡರ್ ಹಾಕುವುದಕ್ಕೆ ಯಾರು ಕೂಡ ಬಂದಿರುವುದಿಲ್ಲ. ಈಗ ತಾವು ಮತ್ತೆ ಕರೆದಿದ್ದೀರಿ. ಯಾರು ಕೂಡ ಅದರಲ್ಲಿ ಬರುವುದಿಲ್ಲ. ಬೇರೆ ಒಂದು ನಬಾರ್ಡ್ ಅಥವಾ ವಿಶ್ವಬ್ಯಾಂಕ್ ಯಾವುದರಲ್ಲಾದರೂ ಹಾಕಿ ಟೆಂಡರ್‌ನ್ನು ಕರೆಯಬೇಕೆಂದು ಇವತ್ತು ಕೇಳಿಕೊಳ್ಳುತ್ತಿದ್ದೇನೆ. ಈ ಬಗ್ಗೆ ತಾವು ಏನು ಹೇಳಿದ್ದೀರಿ. ಅದಕ್ಕೆ VGF ಅದರಲ್ಲಿ ಗೈಡ್‌ಲೈನ್ಸ್‌ನ್ನು ಯಾವ ಫಂಡ್‌ನಲ್ಲಿ ಕರೆದಿದ್ದೀರೆಂದು ತಾವು ಹೇಳಿದ್ದೀರಿ. ಅದೇನೂ ರಾಜ್ಯದ ಬಜೆಟ್ಟೋ, ಏನು ಕೇಂದ್ರದ ಬಜೆಟ್ಟೋ ಯಾವ ರೀತಿಯಾಗಿ ಕರೆದಿದ್ದೀರಿ. ತಾವು ಈ ರೋಡ್‌ನ್ನು ನೋಡಿದ್ದೀರಿ. ತಾವು ಆ ರೋಡಿಗೆ ಬಂದಿದ್ದೀರಿ. ಏಕೆಂದರೆ, ಅಲ್ಲಿ ಸಿಮೆಂಟ್ ಫ್ಯಾಕ್ಟರಿ ಇದೆ. ಈ ಕಡೆಗೆ ಸಿಮೆಂಟ್ ಆಂಧ್ರಕ್ಕೂ ಹೋಗುತ್ತದೆ ಹಾಗೂ ಈ ಕಡೆಗೆ ಸಿಮೆಂಟ್ ಮಹಾರಾಷ್ಟ್ರಕ್ಕೂ ಹೋಗುತ್ತದೆ. ಈಗ ಶಹಾಬಾದ್ ಚಪ್ಪಡಿ ಕಲ್ಲುಗಳಿವೆ, ಅವುಗಳು ಕೂಡ ಇವತ್ತು ಬಹಳ heavy load ತೆಗೆದುಕೊಂಡು ಇವತ್ತು ಹೋಗುತ್ತಿವೆ. ಅದಕ್ಕೆ ಇವತ್ತು ಮಳೆಗಾಲ ಅಥವಾ ಏನೇ ಬಂತು ಎಂದರೂ ಸಹ ಗಾಡಿಗಳು ಓಡಡುವುದಕ್ಕೆ ಸರಿಯಾದ ರೋಡ್ ಇಲ್ಲ. ಇದಕ್ಕೆ ಆದಷ್ಟು ಬೇಗ ಟೆಂಡರ್ ಕರೆದು ಬೇರೆ ರೀತಿಯಲ್ಲಿ ಬೇಗ ಮಾಡಿಕೊಡಬೇಕು ಎಂದು ತಮ್ಮ ಮುಖಾಂತರ ಇವತ್ತು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು: ಉತ್ತರ ಹೇಳಿ.

ಶ್ರೀ ಸಿ.ಎಂ.ಉದಾಸಿ(ಲೋಕೋಪಯೋಗಿ ಸಚಿವರು): ಸನ್ಮಾನ್ಯ ಸಭಾಧ್ಯಕರೆ, ಈ ರಸ್ತೆ ಬಗ್ಗೆ ಹಾಗೂ ಅವರ ಆತಂಕದ ಬಗ್ಗೆ ನಾನು ಗಮನಿಸಿದ್ದೇನೆ. ಆ ರಸ್ತೆ ಬಗ್ಗೆ ಅನೇಕ ಜನ ಗುಲ್ಬರ್ಗದ ಶಾಸಕರು, ಅದರಲ್ಲಿ ಡಾ: ಶರಣಪ್ರಕಾಶ್ ಪಾಟೀಲ್ ಹಾಗೂ ಮೊದಲಾದಿಯಾಗಿ ಒಂದು ಎಲ್ಲರ ಬಯಕೆ ಇದು. ಅತೀ ಶೀಘ್ರದಲ್ಲಿ ಆಗಬೇಕು ಎನ್ನುವ ಬಯಕೆ ಇದೆ ಮತ್ತು ಅವರು ಹೇಳಿದ ಹಾಗೆ ಅತ್ಯಂತ ದಟ್ಟಣೆ ಇದ್ದಂಥ ಸ್ಥಳ ಅದು ಹಾಗೂ ಅನೇಕ ಕಾರ್ಖಾನೆಗಳಿಗೆ ಓಡಾಡುವಂಥ ರಸ್ತೆ ಅದು. ಅಲ್ಲಿ ಓಡಾಡುವ ವಾಹನಗಳ ಸಂಖ್ಯೆ ಹೆಚ್ಚು ಇದೆ. ವಾಗ್ದರಿ–ರಿಬ್ಬನಪಲ್ಲಿ ರಸ್ತೆಯನ್ನು

ನಾವು VGFನಲ್ಲಿ ಅಂದರೆ, Viability Gap funding ನಲ್ಲಿ 197 ಕೋಟಿ ರೂಪಾಯಿಗಳಿಗೆ ಟೆಂಡರ್ ಕರೆದಾಗ 13 ಜನ ಗುತ್ತಿಗೆದಾರರು ಪೂರ್ವಾ ರೀತಿಯನ್ನು ನಾವು qualify ಮಾಡಿದ್ದೇವೆ. ಆದರೆ ಇಲ್ಲಿ ನಾಲ್ಕು ಜನ ಗುತ್ತಿಗೆದಾರರು ಕೊನೆಗೆ ಬಂದು ಅದರಲ್ಲಿ ತೀರ್ಮಾನದಲ್ಲಿದ್ದರು. ಆದರೆ, ಕೊನೆಗೆ ಏನು ಬಂತು ಎಂದರೆ, ಅಲ್ಲಿ SR rateನ ವ್ಯತ್ಯಾಸದ ಬಗ್ಗೆ ಬಂದ ಮೇಲೆ ಅದರ ಬದಲಾವಣೆ ಮಾಡಬೇಕಾದಂಥ ಅವಕಾಶ ಬಂದಿದ್ದರಿಂದ ಈಗ ಕೇಂದ್ರ ಸರ್ಕಾರದ ಜೊತೆಗೆ ಚರ್ಚೆ ಮಾಡಿದಮೇಲೆ 247 ಕೋಟಿ ರೂಪಾಯಿಗಳಿಗೆ ಈ ರಸ್ತೆಯನ್ನು ನಿರ್ಮಾಣ ಮಾಡುವುದರ ಸಲುವಾಗಿ ಅನುಮತಿ ದೊರೆಯುತ್ತಿದೆ. ಅದನ್ನು ಟೆಂಡರ್ ಕರೆದು ನಾವು 30-07-2009ಕ್ಕೆ ಕೊನೆಯ ದಿನಾಂಕ ಇಟ್ಟು ಟೆಂಡರ್ ಕರೆಯುತ್ತಿದ್ದೇವೆ. 29-09-2009ರೊಳಗಾಗಿ ಇದರ ಅಂತಿಮ ತೀರ್ಮಾನವಾಗಿ ಕಾಮಗಾರಿಯನ್ನು ಪ್ರಾರಂಭ ಮಾಡುವಂಥ ವ್ಯವಸ್ಥೆ ಇದೆ. ಅವರಿಗೆ VGF funding ಎಂದರೆ ನಮಗೆ ಅರ್ಥವಾಗಲಿಲ್ಲ ಎನ್ನುವ ಮಾತನ್ನು ಅವರು ಹೇಳುತ್ತಿದ್ದಾರೆ. ಕೇಂದ್ರ ಸರ್ಕಾರದವರು ಶೇಕಡಾ 20ರಷ್ಟು ಮತ್ತು ರಾಜ್ಯ ಸರ್ಕಾರದವರು ಶೇಕಡಾ 20ರಷ್ಟು ಹಣವನ್ನು ಗುತ್ತಿಗೆದಾರರಿಗೆ ಕೊಡಬೇಕಾಗುತ್ತದೆ. ಗುತ್ತಿಗೆದಾರರು ಶೇಕಡಾ 60ರಷ್ಟು ಹಣವನ್ನು ಅದರ ಮೇಲೆ ವ್ಯಯ ಮಾಡಬೇಕಾಗುತ್ತದೆ. ವ್ಯಯ ಮಾಡಿ ಅವರು ಟೋಲ್ ಮಾಡಿ, ಟೋಲ್ ಮೂಲಕ ಅವರ ತಮ್ಮ ಆದಾಯವನ್ನು ಅಥವಾ ಅವರು ತೊಡಗಿಸಿದ ಹಣವನ್ನು ಹಿಂಪಡೆಯುವುದಕ್ಕೆ ಅವಕಾಶವಿದೆ. ಇಂತಹ ಯೋಜನೆಗಳು ಬೇರೆ ಬೇರೆ ರಾಜ್ಯಗಳಲ್ಲಿ ಆಗುತ್ತಿರಬೇಕಾದರೆ ನಮ್ಮಲ್ಲಿಯೂ ಸಹ ಪ್ರಾಯೋಗಿಕವಾಗಿ ಮೂರು ರಸ್ತೆಗಳನ್ನು ನಾವು ಗುರುತಿಸಿದ್ದೇವೆ. ಇದಕ್ಕೆ ಅನೇಕರು ಈಗಾಗಲೇ ತಮ್ಮ ಬಯಕೆಯನ್ನು ವ್ಯಕ್ತಪಡಿಸಿದ್ದಾರೆ. ನನಗೆ ವಿಶ್ವಾಸವಿದೆ. ಇದು ಅತೀ ಶೀಘ್ರದಲ್ಲಿ 247 ಕೋಟಿ ರೂಪಾಯಿಗಳಿಗೆ ಇವತ್ತು ಏನು ಮೊದಲಿಗಿಂತ ಶೇಕಡಾ 26ರಷ್ಟು ಹೆಚ್ಚಿಗೆ ಕೇಂದ್ರ ಸರ್ಕಾರದ ಅನುಮೋದನೆ ದೊರೆಯುತ್ತಿರುವುದರಿಂದ ಈ ಕೆಲಸ ಅತಿ ಶೀಘ್ರದಲ್ಲಿ ಆಗುತ್ತದೆ ಎನ್ನುವುದನ್ನು ಅವರಿಗೆ ಭರವಸೆ ಕೊಡುವುದಕ್ಕೆ ನಾನು ಇಚ್ಛೆ ಪಡುತ್ತೇನೆ.

ಶ್ರೀ ಮಾಲೀಕಯ್ಯ ಗುತ್ತೇದಾರ್: ಸನ್ಮಾನ್ಯ ಅಧ್ಯಕ್ಷರೇ, ಲೋಕೋಪಯೋಗಿ ಇಲಾಖೆಯ ಸಚಿವರಿಗೆ ನಾನು ಪ್ರಶ್ನೆ ಕೇಳುತ್ತಿದ್ದೇನೆ. ಈಗಾಗಲೇ ತಾವು ಉತ್ತರ ಕೊಟ್ಟಿದ್ದೀರಿ. ಈಗಿನ ಅಂದಾಜು ಪಟ್ಟಿ ಪ್ರಕಾರ ಇದಕ್ಕೆ 237 ಕೋಟಿ ರೂಪಾಯಿಗಳ ಅಂದಾಜು ವೆಚ್ಚವಾಗಿದೆ. ಇದು ಸುಮಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ. ಆಂಧ್ರ, ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ಹಾದು ಹೋಗತಕ್ಕಂಥ ಈ ರಸ್ತೆ, ಅಲ್ಲಿ ಅನೇಕ ಕಾರ್ಖಾನೆಗಳಿವೆ, ತುಂಬಾ heavy traffic ಅಲ್ಲಿ ಹೋಗುವುದರಿಂದ ರಸ್ತೆ ಬಹಳ ಹದಗೆಟ್ಟಿದೆ. ಮಾನ್ಯ ಸುಭಾಷ್ ಗುತ್ತೇದಾರ್‌ರವರು ಹೇಳಿದ ಹಾಗೆ

ಮಹಾರಾಷ್ಟ್ರದವರೆಗೆ ಉತ್ತಮವಾದ ರಸ್ತೆಯಿದೆ. ಮಹಾರಾಷ್ಟ್ರವಾದ ಮೇಲೆ ಕರ್ನಾಟಕಕ್ಕೆ enter ಆದಮೇಲೆ ನಮಗೆ ಬೈಯ್ಯುತ್ತಾರೆ. ಸರ್ಕಾರಕ್ಕೂ ಬೈಯ್ಯುತ್ತಾರೆ, ಅಲ್ಲಿ ಶಾಸಕರಿಗೂ ಬೈಯ್ಯುತ್ತಾರೆ. ಇದು ಅನೇಕ ಶಾಸಕರಿಗೆ ಸಂಬಂಧ ಪಟ್ಟ ರಸ್ತೆಯಾಗಿದೆ. ಚಿತ್ತಾಪುರ ಶಾಸಕರಿಗೆ ಬರುತ್ತದೆ. ಸೇಡಂ, ಅಫ್ಜಲ್‌ಪುರ ಮತ್ತು ಆಳಂದ್‌ಗೆ ಬರುತ್ತದೆ. ನಾನು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ, ಆದಷ್ಟು ಬೇಗ, ಇದು ವಿಶ್ವಯೋಜನೆಯಲ್ಲಿ ಆಗಬಹುದಾಗಿತ್ತು. ವಿಶ್ವಯೋಜನೆಯಲ್ಲಿ ಪ್ರಮುಖವಾದ ರಸ್ತೆಗಳು ಆದವು. ನಿಮಗೆ ಬೇಕಾದಂಥವುಗಳಿಗೆ ಸಂಪೂರ್ಣ ರಾಜ್ಯ ಬಜೆಟ್ ಕೊಟ್ಟು ಸಂಪೂರ್ಣವಾಗಿ ಪೂರ್ತಿ ಮಾಡುತ್ತೀರಿ. ಇದಕ್ಕೆ ಕೇಂದ್ರದ ನೆರವನ್ನು ಏಕೆ ಕೋರಬೇಕಾಗಿತ್ತು? ಇಲ್ಲಿ ತಾರತಮ್ಯವಾಗುತ್ತದೆ. ನಮ್ಮ ಹಿಂದುಳಿದಂಥ ಪ್ರದೇಶಕ್ಕೆ ತಾವು ವಿಶೇಷವಾಗಿ ಮಾನ್ಯತೆ ಕೊಡಬೇಕಾದರೆ ಅಥವಾ ಕಾಳಜಿ ಇದ್ದರೆ ತಾವು ಕೂಡಲೇ ಶೀಘ್ರದಲ್ಲೇ ಇದನ್ನು ಟೆಂಡರ್ ಕರೆದು ಕೆಲಸವಾಗಬೇಕು ಎಂದು ತಮ್ಮ ಮುಖಾಂತರ ಹೇಳುತ್ತೇನೆ.

ಅಧ್ಯಕ್ಷರು: ಮಾನ್ಯ ಸುಭಾಷ್‌ರವರೇ, ಮತ್ತೆ ತಾವು ಏನಾದರೂ ಕೇಳುವುದು ಇದ್ದರೆ ಕೇಳಿಬಿಡಿ.

(ಗೊಂದಲ)

ಶ್ರೀ ಸುಭಾಷ ಆರ್. ಗುತ್ತೇದಾರ್: ಈಗಾಲಾದರೂ ಬರುತ್ತದೆಯೇ ಎಂದು ಕೇಳುತ್ತೇನೆ. ಬಂದಿಲ್ಲವೆಂದರೆ ಏನು ಮಾಡುತ್ತೀರಿ?

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಅದಕ್ಕೆ ಬಹಳ hopeful ಆಗಿ ಇದ್ದಾರೆ. ಏಕೆಂದರೆ, ಪುರಸ್ಕೃತ ಅಂದಾಜಾಗಿ ಈಗಾಗಲೇ 247 ಕೋಟಿ ಮಾಡಿದ್ದೇವೆ ಎಂದು hopeful ಆಗಿ ಇದ್ದಾರೆ. ಅದು ಬರದೇ ಇದ್ದರೆ ಹೇಗೆ? ಮಾನ್ಯ ಸಚಿವರಲ್ಲಿ ನನ್ನ ಮನವಿ ಏನೆಂದರೆ, ಇದಕ್ಕೂ ಕೂಡ ಯಾರೂ ಬರದೇ ಇದ್ದರೆ ನಿಮ್ಮ Viability Gap Funding ಏನು ಇದೆಯಲ್ಲಾ, 20% ರಾಜ್ಯ ಮತ್ತು 20% ಕೇಂದ್ರ ಎಂದು ಇದೆ. 20% ಕೇಂದ್ರ ಒಪ್ಪಿದ್ದಾರೆ. ನಿಮ್ಮ ಕಡೆಯಿಂದ ಅಂದರೆ ರಾಜ್ಯ ಸರ್ಕಾರದಿಂದ ಇನ್ನೂ ಒಂದು 20% ಹಣವನ್ನು ಕೂಡಿಸಿ, 60% Viability Gapಗೆ ನೀವು ಟೆಂಡರ್‌ನ್ನು ಕರೆಯತಕ್ಕಂಥಾದ್ದನ್ನು ನೀವು ಮಾಡಿದರೆ ಮಾತ್ರ ಇದಕ್ಕೆ ಏನಾದರೂ solution ಬರುವುದಕ್ಕೆ ಸಾಧ್ಯವಿದೆ. ಇಲ್ಲದಿದ್ದರೆ, ಇದರ ಮೇಲೆ ಒಂದು ವೇಳೆ ಬರಲಿಲ್ಲವೆಂದರೆ ಏನು ಮಾಡುತ್ತೀರಿ ಸಚಿವರು ಏನು ಮಾಡುತ್ತೀರಿ? ಬರಲಿಲ್ಲವೆಂದರೆ ಏನಾದರೂ ಮಾಡಲೇಬೇಕಲ್ಲವೇ?

ಅಧ್ಯಕ್ಷರು: ಮಾನ್ಯ ಉದಾಸಿಯವರೇ ಹೇಳಿ?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು): ಸನ್ಮಾನ್ಯ ಸಭಾಧ್ಯಕ್ಷರೆ, ಇಬ್ಬರು ಗುತ್ತೇದಾರ್ ಸಹೋದರರು ಏನು ಹೇಳುತ್ತಿದ್ದಾರೆ ಅದು ಮತ್ತು ಡಾ:ಶರಣ

ಪ್ರಕಾಶ್ ಪಾಟೀಲ್ ಏನು ಹೇಳುತ್ತಿದ್ದಾರೆ, ಈ Viability Gap Funding ನಲ್ಲಿ ರಾಜ್ಯ ಶೇಕಡಾ 20ರಷ್ಟು, ಕೇಂದ್ರ ಸರ್ಕಾರದ ಶೇಕಡಾ 20ರಷ್ಟು ಹಣ ಕೊಡುವ ವ್ಯವಸ್ಥೆ ಇಟ್ಟುಕೊಂಡು, ಶೇಕಡಾ 60ರಷ್ಟು ಮಾತ್ರ ಗುತ್ತಿಗೆದಾರರು ಹಣ ತೊಡಗಿಸಬೇಕು. ಈ ಕಂಡೀಷನ್ ಮೇಲೆ ಟೆಂಡರ್ ಕರೆಯುವುದಕ್ಕೆ ವ್ಯವಸ್ಥೆ ಇದೆ.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ರಾಜ್ಯದ್ದು ಎಷ್ಟಿದೆ?

ಶ್ರೀ ಸಿ.ಎಂ.ಉದಾಸಿ: ರಾಜ್ಯದ್ದು 20% ಎಂದು ಹೇಳಿದ್ದೇನೆ.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ಜಾಸ್ತಿ ಮಾಡಿ

ಶ್ರೀ ಸಿ.ಎಂ.ಉದಾಸಿ: ಜಾಸ್ತಿ ಮಾಡುವುದಕ್ಕಾಗುವುದಿಲ್ಲ. ಇದಕ್ಕೆ ಒಪ್ಪಿಕೊಳ್ಳುತ್ತಾರೆ. ಈಗ ಬಹಳ ಜನ ಒಪ್ಪಿಕೊಳ್ಳುತ್ತಾರೆ ಎನ್ನುವ ವಿಶ್ವಾಸವಿದೆ. ಇದು ಎರಡು ತಿಂಗಳಿಗೆ, 30-07-2009ಕ್ಕೆ ಟೆಂಡರ್ ಕರೆದಿದ್ದೂ ಇದೆ. ಅದು final ಆಗುತ್ತದೆ.

ಶ್ರೀ ಸುಭಾಷ್ ಆರ್. ಗುತ್ತೇದಾರ್: ಯಾರು ಬರಲಿಲ್ಲವೆಂದರೆ ಏನು ಮಾಡುತ್ತೀರಿ? ಒಪ್ಪಿಕೊಳ್ಳಲಿಲ್ಲವೆಂದರೆ ಏನೂ ಮಾಡುತ್ತೀರಿ?

ಶ್ರೀ ಸಿ.ಎಂ.ಉದಾಸಿ: ಒಪ್ಪಿಕೊಳ್ಳಲಿಲ್ಲವೆಂದರೆ, ಮುಂದೆ ಸರ್ಕಾರ ರಸ್ತೆ ನಿರ್ಮಾಣಕ್ಕಾಗಿ ಯಾವುದಾದರೂ ಬೇರೆ ಮಾರ್ಗದಿಂದ ಕಾರ್ಯಕ್ರಮವನ್ನು ಕೈಗೊಳ್ಳುತ್ತೇವೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

ಚಿತ್ರದುರ್ಗ ಕೋಟೆ ಒತ್ತುವರಿ ತಡೆಗಟ್ಟುವ ಬಗ್ಗೆ

57(203) ಶ್ರೀ ತಿಪ್ಪೇಸ್ವಾಮಿ(ಚಳ್ಳಕೆರೆ)
ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು)

ಅ) ಚಿತ್ರದುರ್ಗದ ಐತಿಹಾಸಿಕ ಕೋಟೆಯ ಜಾಗದಲ್ಲಿ ಒತ್ತುವರಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ವಿವರ ಒದಗಿಸುವುದು);

ಬಂದಿದೆ. ಭಾರತೀಯ ಪುರಾತತ್ವ ಸರ್ವೇಕ್ಷಣದ ಸುಪರ್ದಿನಲ್ಲಿರುವ ಬುರಟನಹಟ್ಟಿ ಪ್ರದೇಶ, ಗಾರೆಬಾಗಿಲು ಹಾಗೂ ಇತರ ಪ್ರದೇಶಗಳಲ್ಲಿ ಒತ್ತುವರಿ ಕಂಡುಬರುತ್ತದೆ.

ಆ) ಈ ಒತ್ತುವರಿಯನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ಸರ್ಕಾರವು ಯಾವ ಕ್ರಮಗಳನ್ನು ಕೈಗೊಂಡಿದೆ;

ಒತ್ತುವರಿಯಾಗಿರುವ ಪ್ರದೇಶವನ್ನು ರಾಜ್ಯ ಸರ್ಕಾರದ ಕಂದಾಯ ಇಲಾಖೆಯ ಮೋಜಣಿದಾರರಿಂದ ಮೋಜಣಿ ಮಾಡಿಸಿ ಒತ್ತುವರಿಯಾಗಿರುವ ಪ್ರದೇಶವನ್ನು ಗುರುತಿಸಿ, ಒತ್ತುವರಿದಾರರನ್ನು ತೆರವುಗೊಳಿಸಲು ಭಾರತೀಯ ಪುರಾತತ್ವ ಸರ್ವೇಕ್ಷಣೆಯು ಈಗಾಗಲೇ ಕ್ರಮ ವಹಿಸಿದೆ.